**ಬಿಡುಗಡೆಗೆ ಶಿಫಾರಸ್ಸು ಮಾಡಲಾದ ನೂತನ ತಳಿಗಳು ಹಾಗು ವಿವರ (5)**

2024–25ರಲ್ಲಿ ಧಾನ್ಯ ಜೋಳ, ಕಪ್ಪು ಅರಿಶಿಣ ಮತ್ತು ಅರಿಶಿಣ ಬೆಳೆಯಲ್ಲಿ ತಲಾ ಒಂದರಂತೆ ಮೂರು ಅಧಿಕ ಇಳುವರಿ ನೀಡುವ ತಳಿ ಹಾಗೂ ಸೂರ್ಯಕಾಂತಿ ಮತ್ತು ಹರಳು ಬೆಳೆಯಲ್ಲಿ ತಲಾ ಒಂದರಂತೆ ಎರಡು ಸಂಕರಣ ತಳಿಗಳನ್ನು ರೈತ ಸಮುದಾಯ ಹಾಗೂ ಇತರೆ ಪಾಲುದಾರರಿಗೋಸ್ಕರ ಬಿಡುಗಡೆ ಮಾಡಲಾಗಿದೆ.

| ಕ್ರ.ಸಂ. | ಬೆಳೆ | ತಳಿ | ಶಿಫಾರಸ್ಸು ಮಾಡಿದ ವಲಯ |
|---|---|---|---|
| 1. | ಜೋಳ | ಸಿಎನ್‌ಜಿಎಸ್ – 1 | 6 |
| 2. | ಸೂರ್ಯಕಾಂತಿ | ಕೆಬಿಎಸ್‌ಹೆಚ್–88 | 5 & 6 |
| 3. | ಹರಳು | ಬಿಸಿಹೆಚ್–162 | 5 |
| 4. | ಕಪ್ಪು ಅರಿಶಿಣ | ಸಿಹೆಚ್‌ಎನ್‌ಬಿಟಿ – 1 | 6 |
| 5. | ಅರಿಶಿಣ | ಐಐಎಸ್‌ಆರ್ ಪ್ರತಿಭಾ | 6 |

- **ಜೋಳದ ತಳಿ ಸಿಎನ್‌ಜಿಎಸ್–1:** ನೂತನವಾಗಿ ವಲಯ–6ಕ್ಕೆ ಬಿಡುಗಡೆಗೆ ಅನುಮೊದನೆ ಗೊಂಡಿರುವ ಮಧ್ಯಮಾವದಿ ತಳಿ, ಈ ತಳಿಯು 100 ರಿಂದ 105 ದಿನಗಳಿಗೆ ಕಟಾವಿಗೆ ಬರಲ್ಲಿದ್ದು ಸರಿ ಸುಮಾರು 39 ರಿಂದ 42 ಕ್ವಿಂಟಾಲ್ ಧಾನ್ಯದ ಇಳುವರಿ, ಮದ್ಯಮ ಎತ್ತರದ ಗಿಡವಾಗಿದ್ದು ಮತ್ತು 30 ರಿಂದ 33 ಟನ್ ಮೇವಿನ ಇಳುವರಿಯನ್ನು ಪ್ರತಿ ಹೆಕ್ಟರ್‌ಗೆ ನೀಡಲ್ಲಿದ್ದು ಕಟಾವಿನ ಸಮಯದಲ್ಲೂ ಸಹ ಗಿಡವು ಹಸಿರಿನಿಂದ ಕೂಡಿರುತ್ತದೆ.
- **ಸೂರ್ಯಕಾಂತಿ ಸಂಕರಣತಳಿ ಕೆಬಿಎಸ್‌ಹೆಚ್–88:** ಕೆಬಿಎಸ್‌ಹೆಚ್–88 ಅಲ್ಪಾವಧಿ ಸಂಕರಣ ತಳಿಯಾಗಿದೆ (84–86 ದಿನಗಳು). ಸಂಕರಣತಳಿಯು ಅಧಿಕ ಬೀಜದ ಇಳುವರಿ (22–24 ಕ್ವಿಂ/ಹೆ), ಅಧಿಕ ಎಣ್ಣೆಯ ಇಳುವರಿ (9.5–10 ಕ್ವಿಂ/ಹೆ) ಮತ್ತು ಕೇದಿಗೆ ರೋಗ ನಿರೋಧಕ ಶಕ್ತಿ ಹೊಂದಿರುತ್ತದೆ. ವಲಯ 5 ಮತ್ತು 6ಕ್ಕೆ ಶಿಫಾರಸ್ಸು ಮಾಡಲಾಗಿದೆ.
- **ಹರಳು ಸಂಕರಣ ತಳಿ ಬಿಸಿಹೆಚ್–162:** ಒಣ ಬೇಸಾಯಕ್ಕೆ ಸೂಕ್ತವಾದ ಮಧ್ಯಮಾವಧಿ ಸಂಕರಣ ತಳಿಯಾಗಿದ್ದು, ಹೆಚ್ಚಿನ ಇಳುವರಿಯೊಂದಿಗೆ (15–20 ಕ್ವಿಂ/ಹೆ) ಹೆಚ್ಚಿನ ಎಣ್ಣೆ ಅಂಶವನ್ನು (ಶೇ.47–48) ಹೊಂದಿದೆ. ಮುಳ್ಳು ಸಹಿತ ಕಾಯಿಗಳುಳ್ಳ ಗಿಡಗಳ ಕಾಂಡವು ಹಸಿರು ವರ್ಣದ್ದಾಗಿದ್ದು, ಕಾಂಡ ಮತ್ತು ಎಲೆಯ ಕೆಳಭಾಗದಲ್ಲಿ ಬೂದಿ ಮುಚ್ಚಣಿಕೆಯನ್ನು (double bloom) ಕಾಣಬಹುದು. ಪ್ರಥಮ ಗೊಂಚಲು ಮಾಗಲು 95–100 ದಿನಗಳನ್ನು ತೆಗೆದುಕೊಳ್ಳುತ್ತದೆ ಹಾಗೂ ಕಾಳು ಸಿಡಿಯುವಿಕೆಗೆ ನಿರೋಧಕತೆಯನ್ನು ಹೊಂದಿರುತ್ತದೆ. ಹೆಚ್ಚಿನ ಪರಿಣಾಮಕಾರಿ ಗೊನೆಗಳ ಸಂಖ್ಯೆ ಮತ್ತು ಪ್ರತಿ ಗೊನೆಗಳಲ್ಲಿ ಕಡಿಮೆ ಗಂಡು ಹೂಗಳ ಸಂಖ್ಯೆಯನ್ನು ಹೊಂದಿರುವುದು ಹೆಚ್ಚಿನ ಇಳುವರಿಗೆ ಕಾರಣವಾದ ಗುಣಲಕ್ಷಣಗಳು. ವಲಯ–5ಕ್ಕೆ ಶಿಫಾರಸ್ಸು ಮಾಡಲಾಗಿದೆ.
- **ಕಪ್ಪು ಅರಿಶಿಣ ತಳಿ ಸಿಹೆಚ್‌ಎನ್‌ಬಿಟಿ–1:** ಈ ತಳಿಯು ಮಧ್ಯಮ ಗಿಡದ ಎತ್ತರ ಹೆಚ್ಚಿನ ಎಲೆಗಳು, ತೆಂಡೆಗಳು ಮತ್ತು ಉತ್ತಮ ಹರವು ಹೊಂದಿದ್ದು ಉತ್ತಮ ಭೌತಿಕ ಗುಣಲಕ್ಷಣಗಳನ್ನು (ಸಂಸ್ಕರಣಾ ಸಾಮಾರ್ಥ್ಯ:>20%) ಹೊಂದಿದೆ. ಗೆಡ್ಡೆಗಳು ದಪ್ಪವಾಗಿದ್ದು ಉತ್ಕೃಷ್ಟ ನೀಲಿ ತಿರುಳು ಬಣ್ಣವನ್ನು ಹೊಂದಿದ್ದು ಅಧಿಕ ತಾಜಾ ಗೆಡ್ಡೆಗಳ ಇಳುವರಿಯನ್ನು (8–10 ಟನ್/ಹೆ)

ನೀಡುತ್ತದೆ. ಈ ತಳಿಯು ಸುಮಾರು 255 ರಿಂದ 265 ದಿನಗಳಲ್ಲಿ ಕಟಾವಿಗೆ ಬರುತ್ತದೆ. ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.

- **ಅರಿಶಿಣ ತಳಿ ಐಐಎಸ್‌ಆರ್ ಪ್ರತಿಭಾ:** ಈ ತಳಿಯು ಸುಮಾರು 240 ರಿಂದ 245 ದಿನಗಳಲ್ಲಿ ಕಟಾವಿಗೆ ಬರುತ್ತದೆ. ಅಧಿಕ ತಾಜಾ ಗೆಡ್ಡೆಗಳ ಇಳುವರಿ (34–36 ಟನ್/ಹೆ) ಮತ್ತು ಉತ್ತಮ ಗುಣಮಟ್ಟ (ಸಂಸ್ಕರಣಾ ಸಾಮಾರ್ಥ್ಯ: >ಶೇ.20, ಅಧಿಕ ಕರ್ಕುಮಿನ್ ಅಂಶ: >ಶೇ.5) ಹೊಂದಿದೆ. ಗೆಡ್ಡೆಗಳು ದಪ್ಪವಾಗಿದ್ದು ಉತ್ಕೃಷ್ಟ ಕೆಂಪು ಹಳದಿ ಬಣ್ಣದ ತಿರುಳು ಹೊಂದಿದೆ. ವಲಯ–6ಕ್ಕೆ ಶಿಫಾರಸ್ಸು ಮಾಡಲಾಗಿದೆ.